

ಚಿತ್ರ: ರಂಜು ಪಿ.

ವಾಸಿಸುತ್ತಿದ್ದಾರೆ. ಅರಮನೆಯ ಪಶ್ಚಿಮ ಭಾಗದಲ್ಲಿದೆ. ಖಾಸಗಿ ಅರಮನೆ. ಅರಮನೆಯ ಮುಂಭಾಗ ರಾಜ್ಯ ಸರ್ಕಾರದ ಅಧೀನದಲ್ಲಿದ್ದು ಅದಕ್ಕೆ ಸಾರ್ವಜನಿಕ ಪ್ರವೇಶಕ್ಕೆ ಅವಕಾಶವಿದೆ. ಅರಮನೆ ಹಿಂಭಾಗ (ಖಾಸಗಿ ಅರಮನೆಗೆ) ವಿದ್ಯುತ್ ದೀಪ ಪಂಖಗಳ ಸೌಲಭ್ಯ ಆರಂಭದಿಂದಲೂ ಇದೆ. ಅರಮನೆ ಕೋಟೆಯೊಳಗೆ ಎಂಜಿನ್ ಹೌಸ್‌ನಲ್ಲಿ ಡೈನಮೋದಿಂದ ಉತ್ಪಾದಿಸಿದ ವಿದ್ಯುತ್ ಶಕ್ತಿಯನ್ನು ಅರಮನೆಯ ಹಿಂಭಾಗದ ಖಾಸಗಿ ಅರಮನೆಗೆ ಒದಗಿಸಲಾಗುತ್ತಿತ್ತು.

ಮೈಸೂರಿಗೆ ಶಿವನಸಮುದ್ರದಿಂದ ವಿದ್ಯುತ್ ಶಕ್ತಿ ಸಂಪರ್ಕ ಬರುವುದಕ್ಕೆ ಮೊದಲು ಮನೆಗಳಲ್ಲಿ ಮೊಂಬತ್ತಿಗಳಿರುವ ಕಂದೀಲು ಉರಿಸುತ್ತ ಬೆಳಕು ಪಡೆಯುತ್ತಿದ್ದರು. ಬೀದಿಗಳಲ್ಲಿ ಸೀಮೆಎಣ್ಣೆ ಲಾಂದ್ರ ಕಂಬಗಳಿದ್ದು ಪ್ರತಿದಿನ ಸಂಜೆ ವೇಳೆಗೆ ಆಳುಗಳು ಎಣ್ಣೆ ಹೊತ್ತೊಯ್ಯುವ ಕಂಬಕ್ಕೆ ಹೋಗಿ ಲಾಂದ್ರ ಶುಭ್ರಮಾಡಿದರೆ ಇನ್ನೊಬ್ಬ ಎಣ್ಣೆ ಹಾಕಿ ದೀಪ ಹಚ್ಚಿ ಮುಂದೆ ಹೋಗುತ್ತಿದ್ದ.

ಅದು 1908 ಸೆಪ್ಟೆಂಬರ್ 26. ಮೈಸೂರು ಶಿವನಸಮುದ್ರ ನಡುವಣ 37 ಮೈಲಿಗಳು, ಮಾರ್ಗದ ತಾಮ್ರದ ತಂತಿಗಳ ಮುಖೇನ ಹರಿದು ಬಂದ ವಿದ್ಯುತ್ ದೀಪ ಮೈಸೂರು ಅರಮನೆಯಲ್ಲಿ ಉರಿಯಿತು. ಇದಕ್ಕೂ ಮೊದಲು ಜನರೇಟರ್‌ನಿಂದ ವಿದ್ಯುತ್ ಉತ್ಪಾದನೆಯಾಗಿ ಅರಮನೆ ಅಗತ್ಯಗಳನ್ನು ಪೂರೈಸುತ್ತಿತ್ತು. ಶಿವನ ಸಮುದ್ರದಿಂದ ವಿದ್ಯುತ್ ಸರಬರಾಜು ಆರಂಭಗೊಂಡ ಬಳಿಕ ಮೈಸೂರು ನಗರಕ್ಕೆ ವಿದ್ಯುತ್ ಒದಗಿಸಲು ಅಗತ್ಯವಾದ ತಾಂತ್ರಿಕ ಸೌಲಭ್ಯಗಳನ್ನು ಅರಮನೆ ಸಮೀಪದಲ್ಲಿ ಸ್ಥಾಪಿಸಲಾಯಿತು. ಇದೇ ಸಂದರ್ಭದಲ್ಲಿ ನಿಯಂತ್ರಣ ಕೊಠಡಿಗಳನ್ನು ಅರಮನೆ ಆವರಣದಲ್ಲಿಯೇ ಆರಂಭಿಸಲಾಯಿತು.

ಮೈಸೂರಿಗೆ ವಿದ್ಯುತ್ ಸಂಪರ್ಕ ಸಿಗುವುದಕ್ಕೆ ಮೊದಲೇ ಖಾಸಗಿ ಅರಮನೆಗೆ ವ್ಯವಸ್ಥಿತ ವಿದ್ಯುದೀಕರಣ ವ್ಯವಸ್ಥೆಗಳಿದ್ದವು. ಆದರೆ ಸಾರ್ವಜನಿಕ ಅರಮನೆ ಮುಂಭಾಗಕ್ಕೆ ಈಗಿನಂತೆ ದೀಪಾಲಂಕಾರ ವ್ಯವಸ್ಥೆ ಇರಲಿಲ್ಲ. ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ದೀಪಾಲಂಕಾರಕ್ಕೆಂದು ಪ್ರತ್ಯೇಕ ವ್ಯವಸ್ಥೆಯೂ ಆಗಿರಲಿಲ್ಲ. ವಿಶೇಷ ಸಂದರ್ಭಗಳಲ್ಲಿ ಗ್ಯಾಸ್ ಎಂಜಿನ್‌ನಿಂದ ವಿದ್ಯುತ್ ಉತ್ಪಾದಿಸಿ ಲೈಮ್ ಲೈಟ್‌ಗಳನ್ನು ಉರಿಸಲಾಗುತ್ತಿತ್ತು. ಸೀಮಿತ ಬಾಳಿಕೆಯ ಆರ್ಕ್ ಲ್ಯಾಂಪ್‌ಗಳ ಬಳಕೆಯೂ ಆಗಿತ್ತು. ಡೈನಮೋದಿಂದ ಎಲೆಕ್ಟ್ರಿಕ್ ಬಲ್ಬ್ ಉರಿಸುವ ಕೆಲಸವೂ ನಡೆಯಿತು.

1908ರ ಬಳಿಕ ವಿದ್ಯುತ್ ಶಕ್ತಿ ಉಪಯೋಗಿಸಿ ವಿಶೇಷ ಸಂದರ್ಭಗಳಲ್ಲಿ ಸಾರ್ವಜನಿಕ ಅರಮನೆ ಭಾಗದಲ್ಲೂ ಅಸಂಖ್ಯ ದೀಪಗಳು ಉರಿಯುವಂತೆ ಮಾಡಲಾಗುತ್ತಿತ್ತು. ಅರಮನೆ ವಿಶೇಷ ಸಭೆ ಸಮಾರಂಭಗಳು, ಗಣ್ಯ ಅತಿಥಿಗಳ ಭೇಟಿ ಸಮಯದಲ್ಲೂ ದೀಪಾಲಂಕಾರವಿರುತ್ತಿತ್ತು.

ಜಲವಿದ್ಯುತ್ ಆಗಮನದಿಂದ ಅರಮನೆಯಲ್ಲಿ ದರ್ಬಾರ್ ಹಾಲ್‌ಗೆ ಮೂರು ಎಲಿವೇಟರ್ಸ್ ಅಳವಡಿಕೆಯಾದವು. ವರ್ಣರಂಜಿತ ಕಾರಂಜಿಗಳೂ ವಿದ್ಯುತ್‌ನಿಂದ ವಿಶೇಷ ಆಕರ್ಷಣೆ ಪಡೆದವು. ಅರಮನೆಯಲ್ಲೊಂದು ಫೋಟೊ ಸ್ಟುಡಿಯೊ ಶುರುವಾಯ್ತು. ದರ್ಬಾರ್ ಹಾಲ್ ಮೇಲ್ಭಾಗದಲ್ಲಿ ಪುಟಾಣಿ ರೈಲು ಜೀವ ತಳೆಯಿತು! ಅರಮನೆಯ ಪ್ರವೇಶ ದ್ವಾರಗಳು, ಉದ್ಯಾನ, ಬತೇರಿಗಳು, ದೇವಾಲಯಗಳು ವಿದ್ಯುತ್ ದೀಪಗಳಲ್ಲಿ ಬೆಳಗಿದವು.

ರಾಜಮನೆತನದವರು ಆಗಾಗ ವಿದೇಶ ಪ್ರವಾಸ ಕೈಗೊಳ್ಳುತ್ತಲೇ ಇದ್ದರು. ಒಮ್ಮೆ ವಿದೇಶಿ ಕಟ್ಟಡವೊಂದಕ್ಕೆ ವಿದ್ಯುತ್ ದೀಪಾಲಂಕಾರ ಮಾಡಿದ್ದನ್ನು ನೋಡಿದವರೇ, ಮೈಸೂರು ಅರಮನೆಗೂ ಕಾಯಂ ದೀಪಾಲಂಕಾರ ಮಾಡಲು ನಿರ್ಧರಿಸಿದರು. ಆದರೆ ಅರಮನೆಗೆ ದೀಪಾಲಂಕಾರ ಮಾಡಲು ವಿದ್ಯುದೀಕರಣ ಮಾಡುವ ವ್ಯವಸ್ಥೆ ಇರಲಿಲ್ಲ. ಅರಮನೆ ಮೈಮೇಲೆ ತೆಳು ಹಲಗೆ ಪಟ್ಟಿಗಳನ್ನು ಅಳವಡಿಸಿ ಅದರ ಮೇಲೆ ಕುಳಿ ತೆಗೆದು ದೀಪ ಅಳವಡಿಸುವ ಯೋಜನೆಗೆ ಅರಮನೆ ಒಪ್ಪಿಕೊಂಡ ನಂತರ, (ಡೆಲ್ವಾ) ವಿದೇಶಿ ಸಂಸ್ಥೆಯೊಂದಕ್ಕೆ ದೀಪಾಲಂಕಾರ ಏರ್ಪಾಡು ಮಾಡಲು ಹೊಣೆಗಾರಿಕೆ ನೀಡಲಾಯಿತು. ಇದಕ್ಕೆ ರೂ.15,120ರ ವೆಚ್ಚವನ್ನು ನಿಗದಿ ಮಾಡಲಾಯಿತು. ಮರದ ಪಟ್ಟಿಗಳಿಗೆ ಮೊಳೆ ಒಡೆದು ಕುಳಿ ಮಾಡಿ ಬಲ್ಬ್‌ಗಳ ಅಳವಡಿಕೆ ಮಾಡಲಾಯಿತು. ಬಲ್ಬ್‌ಗಳು ಅಲುಗಾಡದಂತೆ ತಿರುಗಣೆ (ಸ್ಕ್ರೂ) ಮಾದರಿ ದೀಪಗಳನ್ನೇ ಅಳವಡಿಸಲಾಗಿದೆ. 1925ರಲ್ಲಿ ಸಂಪೂರ್ಣ ವಿದ್ಯುತ್ ದೀಪಾಲಂಕಾರ ಆರಂಭವಾಯಿತು.

ಪ್ರಸ್ತುತ ಮೈಸೂರು ಅರಮನೆ ದೀಪಾಲಂಕಾರಕ್ಕೆ ಉಪಯೋಗವಾಗುತ್ತಿರುವ ಬಲ್ಬ್‌ಗಳ ಸಂಖ್ಯೆ ಒಂದು ಲಕ್ಷ! ನಾವು ಮನೆಗಳಲ್ಲಿ ಹಚ್ಚಿಡುವ ಸಾಂಪ್ರದಾಯಿಕ ದೀಪಗಳ ಬಣ್ಣವೇ ಅರಮನೆ ದೀಪಗಳಲ್ಲಿ ಕಾಣಸಿಗುವುದು ವಿಶೇಷ. ಬಿರಡೆ ದೀಪದ ಒಳಗಿನ ಸರಳು ಹೊನ್ನಿನ ಬಣ್ಣವಿರುವುದು ಅದು ಆಂಗ್ಲದ ಎಂ ಅಕ್ಷರ ಸಂಕೇತಿಸುವುದು ಇನ್ನೊಂದು ವಿಶೇಷ. ಮೊದಲಿನಿಂದ ಮೊನ್ನೆ ಮೊನ್ನೆವರೆಗೆ ಅರಮನೆ ದೀಪಾಲಂಕಾರಕ್ಕೆ ಬಲ್ಬ್‌ಗಳನ್ನು ಒದಗಿಸಿದ್ದು ರಾಜ್ಯ ಸರ್ಕಾರದ ಒಡೆತನದ ಮೈಸೂರು ಲ್ಯಾಂಪ್ಸ್ ಸಂಸ್ಥೆ. ಸಾಂಪ್ರದಾಯಿಕ ದೀಪಗಳಂತೆ ಬಂಗಾರ ಬಣ್ಣವನ್ನು ಒಡಲಿಟ್ಟುಕೊಂಡ ಪ್ರಖರ ಬೆಳಕಿನ ಮೈಸೂರು ಅರಮನೆ ದೀಪಗಳ ಲೋಕ ಪ್ರಪಂಚ ಖ್ಯಾತಿ, ಇದು ಕಿನ್ನರ ಲೋಕ.

ನಾಲ್ಕೈದು ದಶಕಗಳ ಕಾಲ ಕೋಟ್ಯಂತರ ಜನರನ್ನು ಖುಷಿಪಡಿಸಿ ಮೈಸೂರು ಖ್ಯಾತಿಯನ್ನು ದಶದಿಕ್ಕುಗಳಿಗೂ ಹರಡಿದ ಅರಮನೆ ದೀಪಾಲಂಕಾರ ವೈಭವ ಕುಂದಾಗಿದ್ದು 1980ರ ದಶಕದಲ್ಲಾದ ತಂತ್ರಜ್ಞಾನ ಬದಲಾವಣೆಯಿಂದ. ಅರಮನೆ ಮೇಲಿರುವ ದೀಪಗಳ ಸಾಲು ಸರಮಾಲೆಯಂತೆ ಕಂಡರೂ ಅದರಲ್ಲಿ ಪ್ರತಿ ದೀಪಕ್ಕೂ ಪ್ರತ್ಯೇಕ ಸಂಪರ್ಕವಿದೆ. ಒಂದು ಬಲ್ಬ್ ಹಾಳಾದರೂ ಉಳಿದೆಲ್ಲ ಬಲ್ಬ್‌ಗಳು ಉರಿಯುವಂತಿರಲು ಈ ವ್ಯವಸ್ಥೆ. ಎಲ್ಲಾ ಋತುಗಳಲ್ಲೂ ಎಲ್ಲಾ ದಿನಗಳಲ್ಲೂ ಇದರ ನಿರ್ವಹಣೆ ಅತಗತ್ಯ. ಪಕ್ಷಿಗಳ ಹಾರಾಟದಿಂದ, ಮಳೆಗಾಳಿಯಿಂದ ವೈರ್‌ಗಳ ವ್ಯವಸ್ಥೆ ವ್ಯತ್ಯಾಸಗಳಿಂದ ಪ್ರತಿವರ್ಷ ಅಂದಾಜು 18 ರಿಂದ 20 ಸಾವಿರ ಬಲ್ಬ್‌ಗಳು ಹಾಳಾಗುತ್ತವೆ. ತಂತ್ರಜ್ಞಾನ ಬದಲಾಗಿದ್ದರಿಂದ ಈ ಬಿರಡೆ ದೀಪಗಳ ತಯಾರಿಕಾ ಸಂಸ್ಥೆಗಳೂ ವಿರಳವಾಗಿವೆ.

ಸ್ವಾತಂತ್ರ್ಯಾನಂತರ ದೀಪಾಲಂಕಾರ ವ್ಯವಸ್ಥೆ ರಾಜ್ಯಪಾಲರ ನೇತೃತ್ವದ ಮೇಲುಸ್ತುವಾರಿ ಸಮಿತಿಗಿತ್ತು. ಇದೀಗ ಅರಮನೆ ಮಂಡಲಿ ಕೆ.ಪಿ.ಟಿ.ಸಿ.ಎಲ್. ತಾಂತ್ರಿಕ ನೆರವಿನೊಂದಿಗೆ ನಿರ್ವಹಿಸಲಾಗುತ್ತಿದೆ. ವಿದೇಶಿ ಸಂಸ್ಥೆ ಬಳಸಿದ್ದ, ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದ್ದ ಸಿ.ಎಫ್.ಎಲ್. ಬಲ್ಬ್‌ಗಳನ್ನು, ಸೌರಶಕ್ತಿ ಬಳಸುವ ಸಲಹೆ ಸೂಚನೆಗಳನ್ನು ಅನಿವಾರ್ಯ ಕಾರಣಗಳಿಂದ ಬಳಸಲಾಗಿಲ್ಲ. ಬೇರೆ ಬಲ್ಬ್‌ಗಳ ಉಪಯೋಗದಿಂದ ಬಣ್ಣ ವ್ಯತ್ಯಾಸವಾಗುವ ಸಮಸ್ಯೆಗಳು ಇವೆ. ಸದ್ಯ ದೇಶ ವಿದೇಶಗಳ ಗಮನಸೆಳೆಯುತ್ತಿರುವ ಮೈಸೂರು ಬೆಳಗಿಸುತ್ತಿರುವುದು ಹೊನ್ನ ಚೆಲುವನ್ನು.